ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು)

ಅ) ರೂ 11,423 61 ಲಕ್ಷ ರೂ ಗಳ ಅಂದಾಜುಗಳ ಕಾಮಗಾರಿಗಳನ್ನು ನಬಾರ್ಡ್ ಸಾಲಸೌಲಭ್ಯ ಪಡೆದು ಕೈಗೊಳ್ಳಲು ಯೋಜಿಸಿದೆ ವಿವರಗಳನ್ನು ಅನುಬಂಧದಲ್ಲಿ ನೀಡಿದೆ

ಆ) ಶಿವಮೊಗ್ಗ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಕೆರೆಗಳಲ್ಲಿ ಹೊಳೆತ್ತಲು ಮತ್ತು ಅಭಿವೃದ್ಧಿಗಾಗಿ 2006–07ನೇ ಸಾಲಿನಲ್ಲಿ 37 ಕೆರೆಗಳನ್ನು ಕೈಗೆತ್ತಿಕೊಂಡು ಮಾರ್ಚ್ 2007ರ ರವರೆಗೆ ರೂ 574 42 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ

ಅನುಬಂಧ – I

ಶಿವಮೊಗ್ಗ ಜಿಲ್ಲೆಯಲ್ಲಿ ವಿದರ್ಭ ಪ್ಯಾಕೇಜ್‌ನಡಿಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಪ್ರಸ್ತಾಪಿಸಲ್ಪಟ್ಟಿರುವ ಕ್ಷೇತ್ರವಾರು ಪಟ್ಟಿ

ಕ್ರ ಸಂ	ವಿಧಾನಸಭಾ ಕ್ಷೇತ್ರ	ಕಾಮಗಾರಿ ಸಂಖ್ಯೆ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
1	ವಿಧಾನಸಭಾ ಕ್ಷೇತ್ರ	12	1199 00
2	ಹೊಸನಗರ	21	777 00
3	ಭದ್ರಾವತಿ	13	296 00
4	ಹೊಳೆಹೊನ್ನೂರು	4	80 00
5	ತೀರ್ಥಹಳ್ಳಿ	11	611 70
6	ಸಾಗರ	34	1454 91
7	ಸೊರಬ	38	3840 00
8	ಶಿಕಾರಿಪುರ	72	3165 00
	ಒಟ್ಟು	**205**	**11423 61**

792(725) ಶ್ರೀ ಹಾಲಪ್ಪ ಹೆಚ್ (ಹೊಸನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಶಿವಮೊಗ್ಗ ತಾಲ್ಲೂಕು ತಾವರೆಕೆರೆ ಸಿಂಹಧಾಮ ಸರ್ವತೋಮುಖ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು

ಆ) ಕಳೆದ ಮೂರು ವರ್ಷಗಳಲ್ಲಿ ತಾವರೆಕೆರೆ ಸಿಂಹಧಾಮ ಅಭಿವೃದ್ಧಿಗಾಗಿ ಸರ್ಕಾರ ಖರ್ಚು ಮಾಡಿರುವ ಮೊತ್ತವೆಷ್ಟು (ಮೂರು ವರ್ಷದ ವಿವರ ನೀಡುವುದು)

ಇ) ಈ ಸಿಂಹಧಾಮ ಅಭಿವೃದ್ಧಿಗೆ ಯೋಜನೆ ಮತ್ತು ಅಂದಾಜು ವೆಚ್ಚವೆಷ್ಟು?

ಶ್ರೀ ಸಿ ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹುಲಿ–ಸಿಂಹಧಾಮ ತ್ಯಾವರೆಕೊಪ್ಪದಲ್ಲಿ ಕಳೆದ ಮೂರು ವರ್ಷಗಳಲ್ಲಿ ಹೊಸ ಹುಲಿ ಆವರಣ 22 50 ಹೆ, ಹಾಗೂ ಸಿಂಹಗಳ ಆವರಣ 22 50 ಹೆ, ವಿಸ್ತರಣೆ ಮಾಡಿ ಸದರಿ ಆವರಣಗಳ ಸುತ್ತಲೂ ಚೈನ್‌ಲಿಂಕ್ ಮೆಶ್ ಅಳವಡಿಸಲಾಗಿದೆ ಹಾಗೂ ಹುಲಿ–ಸಿಂಹಧಾಮದ ಅಭಿವೃದ್ಧಿಗಾಗಿ ಪಶು ವೈದ್ಯಕೀಯ ಕಟ್ಟಡ ಹಾಗೂ ಮರಣೋತ್ತರ ಪರೀಕ್ಷಾ ಕೊರಡಿಯನ್ನು ನಿರ್ಮಿಸಿದೆ ಹಾಗೂ ಗಲ್ಲಿ ಚೆಕ್ಸ್, ವಾಟರ್ ಹೋಲ್ಸ್, ಸಣ್ಣ ಕೆರೆಗಳ ನಿರ್ಮಾಣ ಮತ್ತು ಅನಿಮಲ್ ಸೈಟಿಂಗ್ ಟ್ರ್ಯಾಕ್ ನಿರ್ಮಿಸಿದೆ

ಆ) ಕಳೆದ ಮೂರು ವರ್ಷಗಳಲ್ಲಿ ತ್ಯಾವರೆಕೊಪ್ಪ ಸಿಂಹಧಾಮದ ಅಭಿವೃದ್ಧಿಗಾಗಿ ಸರ್ಕಾರ ಖರ್ಚು ಮಾಡಿರುವ ವಿವರ ಈ ಕೆಳಗಿನಂತಿದೆ
(ರೂ ಲಕ್ಷಗಳಲ್ಲಿ)

ಕ್ರ. ಸಂ	ಕಾಮಗಾರಿ	ಖರ್ಚು
	2004–05	
1	1 ಹುಲಿ–ಸಿಂಹಧಾಮ ತ್ಯಾವರೆಕೊಪ್ಪದ ಹುಲಿಗಳ ಆವರಣಕ್ಕೆ ಚೈನ್ ಲಿಂಕ್ ಮೆಶ್ ನಿರ್ಮಾಣ ಮಾಡಿದ ಬಗ್ಗೆ	58 886
	2 ಹುಲಿ–ಸಿಂಹಧಾಮ, ತ್ಯಾವರೆಕೊಪ್ಪದ ಸಿಂಹಗಳ ಆವರಣಕ್ಕೆ ಚೈನ್ ಲಿಂಕ್ ಮೆಶ್ ನಿರ್ಮಾಣ ಮಾಡಿದ ಬಗ್ಗೆ	71 266
	3 ಜಿಲ್ಲಾ ಪಂಚಾಯತ್ ಶಿವಮೊಗ್ಗ ವತಿಯಿಂದ ಟ್ರೆಂಚ್‌ಗಳ ನಿರ್ಮಾಣ, ಗಲ್ಲಿಚಿಕ್ಸ್, ಅನಿಮಲ್ ಸೈಟಿಂಗ್ ಟ್ರ್ಯಾಕ್ ಹಾಗೂ ಚೆಕ್ ಡ್ಯಾಂಗಳ ನಿರ್ಮಾಣ	25 000
	ಒಟ್ಟು	155 152
2	1 ಹುಲಿ–ಸಿಂಹಧಾಮ, ತ್ಯಾವರೆಕೊಪ್ಪದ ಹುಲಿಗಳ ಆವರಣಕ್ಕೆ ಚೈನ್ ಲಿಂಕ್ ಮೆಲ್ ನಿರ್ಮಾಣ ಮಾಡಿದ ಬಗ್ಗೆ	0 588
	2 ಹುಲಿ–ಸಿಂಹಧಾಮ, ತ್ಯಾವರೆಕೊಪ್ಪದ ಸಿಂಹಗಳ ಆವರಣಕ್ಕೆ ಚೈನ್ ಲಿಂಕ್ ಮೆಲ್ ನಿರ್ಮಾಣ ಮಾಡಿದ ಬಗ್ಗೆ	0 701
	3 ಜಿಲ್ಲಾ ಪಂಚಾಯತ್ ಶಿವಮೊಗ್ಗ ವತಿಯಿಂದ ಸಣ್ಣ ಕೆರೆಗಳ ನಿರ್ಮಾಣ, ಟ್ರೆಂಚ್ ನಿರ್ಮಾಣ ಹಾಗೂ ಇತರೆ ಅಭಿವೃದ್ಧಿ ಕೆಲಸಗಳು	19 980

	ಒಟ್ಟು	21 269
	2006–07	
3	1 ಪಶುವೈದ್ಯಕೀಯ ಕಟ್ಟಡ ನಿರ್ಮಾಣ	12 000
4	ಹೊರ ರೋಗಿಗಳ ಕಟ್ಟಡ ನಿರ್ಮಾಣ	5 000
5	ಯಲುಬುಗಳನ್ನು ಹಾಕುವ ಗುಂಡಿ ನಿರ್ಮಾಣ	0 470
6	ಪೈಪ್ ಕಲ್‌ವರ್ಟ್	0 910
7	ಹುಲಿ ಆವರಣಗಳ ರಸ್ತೆ ಗುಂಡಿ ಮುಚ್ಚುವುದು	1 600
8	ಸಿಂಹಗಳ ಆವರಣಗಳ ರಸ್ತೆ ಗುಂಡಿ ಮುಚ್ಚುವುದು	1 480
9	ಸಸ್ಯಹಾರಿ ಪ್ರಾಣಿಗಳ ಆವರಣಗಳ ಗುಂಡಿ ಮುಚ್ಚುವ ಕೆಲಸ	1 990
10	ಸ್ವರಾಜ್ ಮಜ್ದಾ ವಾಹನ ಖರೀದಿ	42 55

ಇ) ಮೇಲ್ಕಂಡ ಸಿಂಹಧಾಮದ ಅಭಿವೃದ್ಧಿಗೆ ಹಾಲಿ ರೂಪಿಸಿರುವ ಯೋಜನೆ ಮತ್ತು ಅಂದಾಜು ವಿವರ ಈ ಕೆಳಗಿನಂತಿದೆ

ಲೆಕ್ಕ ಶೀರ್ಷಿಕೆ ಸಂಖ್ಯೆ	ಲೆಕ್ಕಶೀಷಿಕೆಗಳ ವಿವರ		ಲೆಕ್ಕಶೀರ್ಷಿಕೆಗಳ ವಿವರ
ಆಡಳಿತಾತ್ಮಕ ವೆಚ್ಚಗಳು			
1	ಸಿಬ್ಬಂದಿ ವೆಚ್ಚಗಳು	21 990	
2	ಸಿಬ್ಬಂದಿ ಮುಂಗಡ	0 210	
3	ಕಛೇರಿ ವೆಚ್ಚಗಳು	0 200	
4	ಜಾಹೀರಾತು	0 500	
5	ಮೃಗಾಲಯ ತರಬೇತಿ	0 250	23 150
1	ಆಹಾರ ಮತ್ತು ಮೇವು	26 000	26 000
1	ಆಸ್ಪತ್ರೆ/ಪ್ರಾಣಿಗಳ ಶುಶ್ರೂಷೆ ವೆಚ್ಚ	1 500	1 500
ನಿರ್ವಹಣೆ			
1	ನಿರ್ವಹಣೆ ವೆಚ್ಚಗಳು	5 500	
2	ಉದ್ಯಾನವನಗಳ ವೆಚ್ಚಗಳು	2 000	
3	ಸಿವಿಲ್ ಕಾಮಗಾರಿಗಳ ನಿರ್ವಹಣೆ	6 680	14 180
	ಒಟ್ಟು ವೆಚ್ಚ		64 830